ಸಿ.ಸಿ. ನಂ.1125/2022

**ಸಿ. ಡಬ್ಲ್ಯೂಃ 1**

**( ಇಂದು ದಿಃ 10/10/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಖ್ಯ ವಿಚಾರಣೆ : ಪಿರ್ಯಾದಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದ,**

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಮತ್ತು ಈ ಕೆಳಕಂಡ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚೆಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಬ್ಯಾಂಕ್ ಹಿಂಬರಹವನ್ನು ನಿಪಿ-2 ಎಂದು, ಆರೋಪಿಗೆ ನೀಡಿರುವ ನೊಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಅಂಚೆ ರಶೀದಿ ನಿಪಿ-4 ಎಂದು, ಆರೋಪಿಗೆ ಕಳುಹಿಸಿದ ನೋಟೀಸು ಆರೋಪಿ ಸ್ವೀಕರಿಸದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ನಿಪಿ-5 ಎಂದು, ಸದ್ರಿ ಲಕೋಟಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿ ಅದರಲ್ಲಿ ಇರುವ ನೋಟೀಸಿನ ಪ್ರತಿಯನ್ನು ನಿಪಿ-5 ಎ ಎಂದು, ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ಆರೋಪಿಯ ಸಾಲದ ಅರ್ಜಿಯ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ಸಾಲದ ಕರಾರು ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ಡಿಮಾಂಡ ಪ್ರಾಮೀಸರಿ ನೋಟೀನ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಬ್ಯಾಂಕ್ ರಶೀದಿಯ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಬ್ಯಾಂಕ್ ಸ್ಟೇಟ್ ಮೆಂಟಿನ ಯಥಾ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-11 ಎಂದು ಗುರುತಿಸಲಾಯಿತು. .

ಆದ್ದರಿಂದ ದೂರಿನಲ್ಲಿ ಕೇಳಿದಂತೆ ಆದೇಶವಾಗಬೇಕೆಂದು ಕೋರುತ್ತೇನೆ .

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**